ಈ ನಗರಕ್ಕೆ ವಾಸ್ತವ್ಯ ಬದಲಿಸುವುದಕ್ಕೂ ಮೊದಲು.

ತನ್ನೂರಿನ ಸಮೀಪದ ಒಂದು ನಗರದಲ್ಲಿ ಅಂದು ವಾಸಮಾಡುತ್ತಿದ್ದ. ಗೋಡೆಕಟ್ಟಿ ಪ್ರತ್ಯೇಕವಾಗಿಸದ ಒಂದು ಬರಿದಾದ ಹಿತ್ತಲಿನ ನಡುವಿನಲ್ಲಿ ಮನೆ. ಅಪ್ಪ, ಅಮ್ಮ, ಮಗ ಮತ್ತು ಮಗನ ಜೊತೆಗಾತಿಯಾಗಿ ನಡೆಯುತ್ತಿದ್ದ ಯೌವ್ವನವತಿ ಹೆಣ್ಣು ಮಾತ್ರವೇ ಮನೆಯಲ್ಲಿದ್ದುದು.

ಆ ಮನೆ ಚಿಕ್ಕದಾಗಿತ್ತು; ತುಂಬಾ ಚಿಕ್ಕದಾಗಿತ್ತು. ಗಾಜಿನ ಕಿಟಕಿಗಳಿಲ್ಲ. ಹಾಲುಗಳು ಸ್ವಾಗತ ಕೊಠಡಿಗಳೂ ಇಲ್ಲ. ಆದರೆ ಆ ಮನೆ ಮುದ್ದಾಡಬೇಕೆಂದು ತೋರುವ ಒಂದು ನೆನಪು. ಕಾರಣ ಮೃತ ಗೃಹದ ಮೌನ ಅಲ್ಲಿ ಕಟ್ಟೆ ಕಟ್ಟಿ ನಿಂತಿರಲಿಲ್ಲ. ಅಪ್ಪ ಜೋರಾಗಿ ನಗುವುದನ್ನು ಅಮ್ಮ ನಿರಂತರ ಮಾತನಾಡುವುದನ್ನು ಅಂದು ಕೇಳಬಹುದಿತ್ತು.

ವಿದ್ಯುತ್ ದೀಪಗಳಿರಲಿಲ್ಲ. ಆದರೂ ಒಳಜಗಲಿಗಳು ತೀರಾ ದುಃಖಗಳಂತೆ ಕತ್ತಲಿನಿಂದ ಮುಚ್ಚಿಕೊಂಡಿರಲಿಲ್ಲ. ಹಿತ್ತಿಲಿನ ಕೊನೆ ಹೋಗಿ ತಲುಪುತ್ತಿದ್ದುದು ಕಗ್ಗಲ್ಲ ಚೂರುಗಳು ಚದುರಿ ಚಲ್ಲಾಪಿಲ್ಲಿಯಾಗಿ ಬಿದ್ದಿರುವ ದಾರಿಗೆ. ದಾರಿಯ ಬದಿಯಿಂದ ನೋಡಿದರೆ ಮೊದಲು ಕಾಣಿಸುತ್ತಿದ್ದುದು ಒಂದು ಗಿಡ್ಡಗಿನ ಕಬ್ಬಿಣದ ಬಾಗಿಲು. ಅದರ ಮೇಲಿನ ಕಮಾನು ತಂತಿಗಳ ನಡುವೆ ಬೆಳ್ಳಗಿನ ಅಕ್ಷರಗಳಿಂದ ಏನನ್ನೋ ಬರೆದಿಡಲಾಗಿದೆ.

ಏನೆಂದು?

ಯಾವುದು?

ಆ ಬಾಗಿಲು, ದೊಡ್ಡಬಾಗಿಲು?

ಜೈಲು, ಜೈಲು.

ಜೈಲು ಎಂದರೇನೆಂದು ಅಂದು ಮೊದಲಿಗೆ ತಿಳಿಸಿ ಹೇಳಿದವಳು ಕೆಲಸದ ಹುಡುಗಿ. ಅಲ್ಲಿ ಕಳ್ಳರು, ಮಕ್ಕಳನ್ನು ಕದ್ದು ಮಾರಾಟ ಮಾಡುವವರು, ಕೊರಳು ತುಂಡರಿಸುವವರು ಮತ್ತೆ ಎಲ್ಲಾ ಕೆಟ್ಟ ಜನರು ನೆಲೆಸಿರುತ್ತಾರೆ.

ದೊಡ್ಡ ಮನೆ ಖರೀದಿಸಿ ವಾಸ ಖಚಿತ ಮಾಡಿಕೊಂಡುದು ತುಂಬಾ ವರ್ಷಗಳಿಗೂ ಮೊದಲು. ಮುಂಭಾಗದಲ್ಲಿ ಕಾರು ನಿಲ್ಲಿಸಿದಾಗ ಅಪ್ಪ ಹೇಳಿದರು: ಇದು ನಮ್ಮ ಮನೆ.

ಮೂವರಿಗೆ ವಾಸಮಾಡಲು ಇಷ್ಟು ದೊಡ್ಡ ಮನೆ ಬೇಕೋ? ಕೇಳಿದ್ದಿದ್ದರೆ ಅಪ್ಪ ಹೇಳುತ್ತಿದ್ದರು: ಅಪ್ಪ ಈಗ ಹಳೆಯ ವ್ಯಕ್ತಿ ಅಲ್ಲ, ಶ್ರೀಮಂತ. ಅಪ್ಪ ಇದನ್ನೆಲ್ಲ ಇದಕ್ಕಿಂತ ಆಚೆಗಿನದನ್ನೂ ಸಾಧಿಸಬಲ್ಲವರು. ಮತ್ತೆ ಯಾಕೆ ಕಡಿಮೆ ಮಾಡಬೇಕು?

ಅಮ್ಮ ಆ ದೊಡ್ಡ ಮನೆಯ ಚಂದ ಕಂಡು ಕಣ್ಣುತುಂಬಿಕೊಳ್ಳುತ್ತಿದ್ದರು. ಮುಂಬಾಗಿಲು ಕಂಡಾಗ ಮಗನಿಗೆ ಕೆಟ್ಟ ಮನುಷ್ಯರು ನೆಲೆಸಿರುವ ಸ್ಥಳದ ಮುಂಭಾಗದಲ್ಲಿ ಕಂಡ ಆ ಕಬ್ಬಿಣದ ಬಾಗಿಲು ನೆನಪಿಗೆ ಬಂತು.

ಮನೆಯ ಕುರಿತು ಅಮ್ಮನಿಗೆ ಸದಭಿಪ್ರಾಯವಿತ್ತು. ಊರಿನಿಂದ ದೂರದಲ್ಲಿರುವುದೇ ಅಮ್ಮನ ದುಃಖ. ಗೊತ್ತಿರುವವರು ಯಾರೂ ಕಾಣಿಸದಂತಾಯಿತಲ್ಲ, ಅಮ್ಮ ಮನೆಯ ಬಗೆಗೆ ಅಸಮಾಧಾನ ತಾಳಲು ಆರಂಭಿಸಿದ್ದು ನಂತರ.

ಯಾರಿಗೆ ಬೇಕಾಗಿದೆ ಇದೆಲ್ಲಾ? ಚಿನ್ನದಿಂದ ಒಂದು ಮಹಡಿ ಕಟ್ಟಿ ಇಟ್ಟುಕೊಳ್ಳಲಿ. ಆದರೂ ನಾನದನ್ನು ಮರೆಯಲಾರೆ. ಯಾಕೆ ಹೇಳಬೇಕು. ಎಲ್ಲದಕ್ಕೂ ಯೋಗ ಬೇಕು, ಯೋಗ.

ತೋಟದ ಮಾಲಿ, ಡ್ರೈವರು, ಪರಿಚಾರಕ ಪಶ್ಚಿಮಕ್ಕೆ ಇಳಿಸಿದ ಛಾವಣಿ ಮನೆಯಲ್ಲಿ ನೆಲೆಸಿದ್ದರು. ಅಲ್ಲಿ ಹಗಲಿಡೀ ಸುತ್ತಾಡುವುದಿತ್ತು. ಅವರ ವಿಶೇಷಗಳನ್ನು ಕೇಳಬಹುದಿತ್ತು. ತೋಟದ ಮಾಲಿಯ ಬೀಡಿಯನ್ನು ಅಡುಗೆಯವನು ಕದ್ದುಕೊಳ್ಳುತ್ತಿದ್ದ, ಕೇಸುಗಳಾಗುತ್ತಿದ್ದುವು. ಇಬ್ಬರ ಜೋರಾದ ಬಯ್ದಾಟಗಳನ್ನು ಕೇಳಿಸಿಕೊಳ್ಳುವುದು ಮಗನಿಗೆ ಪ್ರಿಯವಾಗಿತ್ತು.

ಮನೆಯೂ ಪರಿಸರವೂ ಒಂದು ಅದ್ಭುತ ಲೋಕದಂತಿತ್ತು. ವರ್ಷಗಳಿಗೂ ಮೊದಲು ಮಗನು ಯುವಕನಾಗಿರಲಿಲ್ಲ. ವಿರೋಧಿಸಲು ಕಲಿತಿರಲಿಲ್ಲ. ಕೋಣೆಗಳಲ್ಲಿಯೂ, ಅಂಗಳಗಳಲ್ಲಿಯೂ ಓಡಾಡಿಕೊಂಡಿದ್ದ. ಮುಂಬಾಗಿಲಿನ ಸಮೀಪವಿರುವ ಮರದ ಗೂಡನ್ನು ನೋಡುತ್ತ ಮೈ ಮರೆತು ದಿನಪೂರ್ತಿ ನಿಲ್ಲುತ್ತಿದ್ದ. ಒಬ್ಬರಿಗೇ ಅಲ್ಲಿ ವಾಸಮಾಡಲು ತುಂಬಾ ಸ್ವಾರಸ್ಯವಿರಬಹುದು. ಒಬ್ಬರಿಗೆ ಮಾತ್ರ. ನಿಲ್ಲಬಹುದು. ಕುಳಿತುಕೊಳ್ಳಬಹುದು. ಮಲಗಬಹುದು. ಬಾಗಿಲು ಹಾಕಿದರೆ ಇಕ್ಕೆಲಗಳಲ್ಲಿರುವ ವೃತ್ತಗಳ ಮೂಲಕ ಹೊರಗಡೆಗೆ ನೋಡಬಹುದು. ಗುಡಾರ ಮನೆಯಲ್ಲಿ